ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಗ್ರಾಮ ಮತ್ತು ಚಿಂತಾಮಣಿಯ ಕಂದಾಯ ಇಲಾಖೆಗೆ ರಾಷ್ಟ್ರೀಯ ಕುಟುಂಬ ಯೋಜನೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 723(916)

ಸದಸ್ಯರ ಹೆಸರು : ಶ್ರೀ ಚೌಡರೆಡ್ಡಿ(ಚಿಂತಾಮಣಿ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು)

ಪ್ರಶ್ನೆ

1. ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಗ್ರಾಮ ಮತ್ತು ಚಿಂತಾಮಣಿಯ ಕಂದಾಯ ಇಲಾಖೆಗೆ ಭಾರತ ಸರ್ಕಾರದ ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮಗಳು ರಾಷ್ಟ್ರೀಯ ಕುಟುಂಬ ಯೋಜನೆಗೆ ಅನುಸಾರವಾಗಿ 2001-2002 ಇಸವಿಯಲ್ಲಿ ಎಷ್ಟು ಅರ್ಜಿಗಳು ಬಂದಿರುತ್ತವೆ?

2. ಇವುಗಳಲ್ಲಿ ಎಷ್ಟು ಅರ್ಜಿಗಳಿಗೆ ಹಣ ಪಾವತಿಸಲಾಗಿದೆ? ಎಷ್ಟು ಅರ್ಜಿಗಳಿಗೆ ಹಣ ಪಾವತಿಸಲಾಗಿಲ್ಲ? (ವಿವರ ನೀಡುವುದು)

3. ಈ ರೀತಿಯ ಯೋಜನೆಗಳನ್ನು ಬಡವರ ಕಲ್ಯಾಣಕ್ಕೋಸ್ಕರ ಮಾಡಿ ಹಣವನ್ನು ಪಾವತಿಸದೇ ಇರುವುದರಿಂದ ಬಡ ಜನಗಳಿಗೆ ಆಗತಕ್ಕಂತಹ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉತ್ತರ

1. ಚೇಳೂರು ಹೋಬಳಿಯಲ್ಲಿ 1-4-2001 ರಿಂದ 31-12-2001ವರೆಗೆ ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿಯಲ್ಲಿ 24 ಅರ್ಜಿಗಳು ಬಂದಿರುತ್ತವೆ.

2. 24 ಅರ್ಜಿಗಳಲ್ಲಿ 3 ಅರ್ಜಿಗಳಿಗೆ ಹಣ ಪಾವತಿಸಲಾಗಿದೆ. 6 ಪ್ರಕರಣಗಳನ್ನು ವಿಲೇ ಇಡಲಾಗಿದ್ದು 4 ಪ್ರಕರಣಗಳಿಗೆ ಹಣ ಪಾವತಿಸಲಾಗುತ್ತಿದೆ. ಉಳಿದ 11 ಪ್ರಕರಣಗಳು ಪರಿಶೀಲನೆಯಲ್ಲಿರುತ್ತವೆ.

3. ಹೌದು. ಈ ಯೋಜನೆಯಡಿ ಅನುದಾನ ಕೇಂದ್ರ ಸರ್ಕಾರದಿಂದ 2 ಹಂತಗಳಲ್ಲಿ ಬಿಡುಗಡೆಯಾಗುತ್ತಿದ್ದು ಅನುದಾನ ಬಿಡುಗಡೆ ಅನುಸರಿಸಿ ಪರಿಹಾರ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಸಮಯಕ್ಕೆ ಸರಿಯಾಗಿ ಅನುದಾನ ಬಿಡುಗಡೆಯಾಗಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ.